**Prajavani**

**Date:** 10-12-2016 **Page No. 03**

Edition: Mysore **Language: Kannada**

# 2 ದಿನಗಳ ಸಮ್ಮೇಳನಕ್ಕೆ ಚಾಲನೆ

ಮೈಸೂರು: ಇಲ್ಲಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲೆಪ್‌ಮೆಂಟ್ ಕೇಂದ್ರದಲ್ಲಿ 'ಕಾರ್ಯಕ್ಷೇತ್ರದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ' ಕುರಿತ 2 ದಿನಗಳ 5ನೇ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ದಿ ಬ್ರಿಟಿಷ್ ಯೂನಿವರ್ಸಿಟಿ ಇನ್ ದುಬೈನ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರೊ.ಆಶ್ಲೇ ಎಚ್.ಪಿನ್ನಿಂಗ್ಟನ್ ಶುಕ್ರವಾರ ಚಾಲನೆ ನೀಡಿದರು.

ನಂತರ, ಮಾತನಾಡಿದ ಅವರು ಜಾಗತೀಕರಣ ಮತ್ತು ಅದರಿಂದ ಮಾನವ ಸಂಪನ್ಮೂಲ ನಿರ್ವಹಣೆ ಕ್ಷೇತ್ರ, ಶಾಲೆಗಳ ಮೇಲೆ ಆಗುತ್ತಿರುವ ಪರಿಣಾಮಗಳನ್ನು ವಿವರಿಸಿದರು.

ಬಾಂಗ್ಲಾದೇಶ, ನೈಜೀರಿಯಾ, ಯುಎಇ ದೇಶಗಳಿಂದ 250ಕ್ಕೂ ಹೆಚ್ಚು ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಸಮ್ಮೇಳನದ ಮುಖ್ಯಸ್ಥರಾದ ಡಾ.ಮೌಸುಮಿ ಸೇನ್‌ಗುಪ್ತ, ಉಪಮುಖ್ಯಸ್ಥ ಡಾ.ನೀಲಂಜನ್ ಸೇನ್‌ಗುಪ್ತ ಇದ್ದರು.